# ಮರಗಳ ಕತೆ

■ ವಿನು ಗಂಗೆ
ಕಲೆ: ಸಂತೋಷ್ ಸಸಿಹಿತ್ಲು

ರಾಜ ಅಕ್ಬರ್, ಅವನ ಮಂತ್ರಿ ಬೀರಬಲ್ಲನ ಒಡಗೂಡಿ ಆಗಾಗ ಕಾಡಿನಲ್ಲಿ ಬೇಟೆಗೆ ಹೋಗುತ್ತಿದ್ದರು. ಆಗಿನ ರಾಜರಿಗೆ ಬೇಟೆ ಎನ್ನುವುದು ರಾಜ್ಯಾಡಳಿತದ ಕೆಲಸಗಳಿಂದ ವಿರಾಮ ಕಂಡುಕೊಳ್ಳಲು ಒಂದು ದಾರಿಯಾಗಿತ್ತು. ಹೀಗೇ ಒಮ್ಮೆ ಬೇಟೆಗೆ ಹೋದಾಗ ಕಾಡಿನ ಸೌಂದರ್ಯ ಆಸ್ವಾದಿಸುತ್ತಾ ಮುನ್ನಡೆದಂತೆ ಅಕ್ಬರ್ ಹಾಗೂ ಬೀರಬಲ್ಲರಿಗೆ ದಾರಿ ತಪ್ಪಿತು. ಬಸವಳಿದು ಬಹಳ ದಾರಿ ಕ್ರಮಿಸಿದ ನಂತರ ಒಂದು ಕಾಡುಜನರ ಬೀಡು ಕಂಡು ಅಲ್ಲಿಗೆ ಹೋದರು. ಕಾಡು ಜನರ ನಾಯಕನು ಮೊಘಲರ ಸಾರ್ವಭೌಮ ತಮ್ಮಲ್ಲಿಗೆ ಬಂದಿರುವುದಕ್ಕೆ ಬಹಳ ಸಂತೋಷಗೊಂಡು ಅತಿಥಿ ಸೌಕರ್ಯದ ಸಕಲ ಏರ್ಪಾಡು ಮಾಡಿದನು. ನಾಗರಿಕತೆಯ ಗಂಧವೇ ಇಲ್ಲದ ಕಾಡಿನ ಜನರ ಆತಿಥ್ಯಕ್ಕೆ ಅಕ್ಬರ್ ಜಹಪನಾ ಮನಸೋತು ಹೋದನು. ವಿಶೇಷವಾಗಿ ಕಿಂಚಿತ್ತೂ ಸೌಕರ್ಯವೇ ಇರದಂತ ಕಾಡಿನಲ್ಲಿ ಅಲ್ಲಿನ ಹೆಂಗಸರು ಕಷ್ಟಕರವಾದ ಎಲ್ಲಾ ಕೆಲಸಗಳನ್ನು ಮಾಡುತ್ತಾ ಅದ್ಭುತ ಸೌಂದರ್ಯವತಿಯರಾಗಿದ್ದು ಅಕ್ಬರನಿಗೆ ಆಶ್ಚರ್ಯವಾಯಿತು. ಮನಸು ತಾಳದೇ ಅವನು ಕಾಡಿನ ನಾಯಕನ ಬಳಿ ನಿಮ್ಮಲ್ಲಿ ಹೆಂಗಸರು ಇಷ್ಟೊಂದು ಸುಂದರವಾಗಿದ್ದಾರಲ್ಲ! ನಮ್ಮ ರಾಣೀವಾಸದಲ್ಲಿ ಸಕಲ ವೈಭೋಗಗಳಿದ್ದರೂ ನಮ್ಮ ಹೆಂಗಸರು ಇಲ್ಲಿನ ಹೆಂಗಸರ ಮುಂದೆ ತೀರಾ ಸಾಧಾರಣವಾಗಿದ್ದಾರಲ್ಲ, ಇವರ ಸೌಂದರ್ಯದ ಗುಟ್ಟೇನು ಎಂದು ಕೇಳಿದನು. ಅದಕ್ಕೆ ಕಾಡಿನ ನಾಯಕನು ಕೈಮುಗಿದು 'ಜಹಪನಾ, ನಾವು ಕಾಡಿನ ಮಕ್ಕಳು. ನಮಗೆ ಹೊತ್ತು ಹೊತ್ತಿಗೆ ಊಟ ಎಲ್ಲಿಂದ ಬರಬೇಕು? ಋತುಮಾನಕ್ಕೆ ತಕ್ಕಂತೆ ಮರಗಳಲ್ಲಿ ಹಣ್ಣು ಹಂಪಲು ಬಿಟ್ಟಾಗ, ಇಲ್ಲವೇ ಗೆಡ್ಡೆ ಗೆಣಸೋ ಅಥವಾ ಬೇಟೆ ಸಿಕ್ಕಾಗ ಊಟ. ಇಲ್ಲವಾದರೆ ಉಪವಾಸವೇ ಗತಿ' ಎಂದು ಹೇಳಿದನು. ಸರಿಯೆಂದು ತಲೆದೂಗಿ ಅವರ ಆತಿಥ್ಯ ಸವಿದು ಅಕ್ಬರ್ ಹಾಗೂ ಬೀರಬಲ್ ರಾಜಧಾನಿಗೆ ಹಿಂದಿರುಗಿದರು.

ಅರಮನೆಗೆ ಬಂದ ಅಕ್ಬರ್ ಮಾರನೇ ದಿನವೇ ಒಂದು ಆದೇಶ ಹೊರಡಿಸಿದನು. 'ರಾಣೀವಾಸದಲ್ಲಿ ಇನ್ನು ಮುಂದೆ ಹೊತ್ತು ಹೊತ್ತಿಗೆ ಅಡುಗೆ ಮಾಡುವಂತಿಲ್ಲ. ರಾಣಿಯರಿಗೆ ಆಯಾ ಕಾಲಕ್ಕೆ ತಕ್ಕಂತೆ ಹಣ್ಣು, ಗೆಡ್ಡೆ–ಗೆಣಸು, ಆಗೀಗ ಮೊಲ, ಜಿಂಕೆ ಮೊದಲಾದ ಕಾಡು ಪ್ರಾಣಿಗಳ ಮಾಂಸದ ಭೋಜನವನ್ನು ಕೊಡಬೇಕು' ಎಂದು. ಈ ಆಜ್ಞೆಯಿಂದ ಬೇಗಮ್ ಸಾಹೇಬಳಿಗೆ ದಿಕ್ಕೇ ತೋಚದಂತಾಯಿತು. ಪೆಚ್ಚು ಮೋರೆ ಹಾಕಿಕೊಂಡು ಕುಳಿತ ಬೇಗಮ್‌ಗೆ ಒಂದೇ ಒಂದು ದಾರಿ ಕಂಡಿತು. ಕೂಡಲೇ ಭಟರನ್ನು ಕರೆದು ಬೀರಬಲ್ಲನನ್ನು ಬರಹೇಳಿ ಕಳುಹಿಸಿದಳು. ಬೀರಬಲ್ಲನು ಬಂದಕೂಡಲೇ ಜಹಪನಾರ ಹೊಸ ಆದೇಶದ ಬಗ್ಗೆ ಹೇಳಿ, ಆ ರೀತಿಯ ಆಹಾರ ತಿಂದರೆ ರಾಣೀವಾಸದವರ ಗತಿ ಅಧೋಗತಿ ಎಂದೂ, ಇದರಿಂದ ನೀನೇ ಕಾಪಾಡಬೇಕು ಎಂದೂ ಹೇಳಿದಳು.

ಬುದ್ಧಿವಂತನಾದ ಬೀರಬಲ್ಲನು ಜಹಪನಾರ ಈ ಆದೇಶದ ಹಿಂದಿನ ಕಾರಣವನ್ನು ಗ್ರಹಿಸಿದನು. ಬೇಗಮ್ ಸಾಹೇಬಳಿಗೆ ಆತಂಕ ಬೇಡವೆಂದು ಹೇಳಿ ಅರಮನೆಯಿಂದ ಹೊರಟನು. ಈ ಸಮಸ್ಯೆ ಪರಿಹರಿಸುವ ಬಗೆಯನ್ನು

